## Participation in Krishi Uthsava



The scientists of Krishi Vigyan Kendra were participated as a resource person in Krishi Utsav held at district, taluk and Hobli levels of Haveri district in the month of October, November and December 2010.

## Training workshop for vocational teachers







Training workshop for vocational teachers of Haveri districts was organized at KVK Hanumanamatti from 08.11.2010 to 10.11.2010. Different topics like dairying, backyard poultry, plant protection, soil testing, decorative candle making and soap oil and phenyl making and grafting technology in horticulture crops were covered during the training programme.

## Training Programmes

### On Campus

- Embroidery training
- Role of KVK's in Transfer of technology
- Disease Management in Organic farming
- Broiler poultry rearing
- IFS for economic stability
- Dairy farming
- Workshop on Agriculture socially useful productive work
- Broiler Farming
- Use of Enviro-fit Chulah
- Vermi compost production technology
- Disease Management in Bengalgram

### Off Campus

- Use of Serrated sickle for Sorghum harvesting
- IPM in Cotton
- IDM in Cotton
- Use of Groundnut decorticator
- Importance of Bio-agents in disease Management
- Importance of azolla feeding
- Vermi compost Production technology
- Disease Management in field crops
- Enrichment of fodder and Azolla-alternative feeding
- Feeding of Dairy animals
- Use of Envirofit chulah

ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಮುದ್ರಿತ ವಿಷಯ

ಗೆ,

____________________

____________________

____________________

ಪಿನ್ ಕೋಡ್ | | | | | | |

ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ॥ ರಾಣೇಬೆನ್ನೂರು, ಜಿ॥ ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)

ಸಂಪಾದಕರು : ಡಾ. ಎಸ್. ವೈ. ಮುಕರ್ತಾಳ,
ಪ್ರಕಾಶಕರು : ಡಾ. ಎಂ.ವಿ. ನಾಗರಾಜ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಹ ಸಂಪಾದಕರು :
ಶ್ರೀಮತಿ ಗೀತಾ ಕಳಕನವರ್, ಡಾ. ಕೆ. ಬಿ. ಯಡಹಳ್ಳಿ, ಡಾ. ಬಿ. ಸಿ. ಹನುಮಂತಸ್ವಾಮಿ, ಡಾ. ಟಿ.ಎಂ. ಸೌಮ್ಯ , ಶ್ರೀ ಎಂ.ಎ. ಗದ್ದನಕೇರಿ
ವಿನ್ಯಾಸ : ಕು. ರೇಖಾ ಕೆ.ಎನ್., ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ
ಛಾಯ ಗ್ರಾಹಕ :: ಶ್ರೀ ಮಹೇಶ ಎಲ್. ಎಂ.



ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org Email:kvk_haveri@rediffmail.com

ಅಕ್ಟೋಬರ್-ಡಿಸೆಂಬರ್, 2010 ಸಂಪುಟ-9 ಸಂಚಿಕೆ-4

## ರೈತರ ಜಾತ್ರೆ, ಕೃಷಿ ಮೇಳ 2010



ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ದಿವಂಗತ ಲಾಲ್ ಬಹದ್ದೂರ ಶಾಸ್ತ್ರಿ ಇವರ ಜನ್ಮದಿನದಂದು ರೈತ ಸಮುದಾಯಕ್ಕೆ ಕೃಷಿ ಕ್ಷೇತ್ರದಲ್ಲಿನ ಬೆಳವಣಿಗೆಗಳನ್ನು ಪರಿಚಯಿಸಲು ನಾಲ್ಕು ದಿನದ ಕೃಷಿ ಮೇಳವನ್ನು ಅಕ್ಟೋಬರ್ 2 ರಿಂದ ಅಕ್ಟೋಬರ್ 5, 2010 ರವರೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಆಯೋಜಿಸಲಾಗಿದ್ದ ಸುಸ್ಥಿರ ಕೃಷಿ, ತೋಟಗಾರಿಕೆ, ಕೃಷಿ ಹುಟ್ಟುವಳಿಗಳ ಮೌಲ್ಯವರ್ಧನೆ ಹಾಗೂ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆ, ಜಲಾನಯನ ಆಧಾರಿತ ಮಣ್ಣು ಮತ್ತು ನೀರು ನಿರ್ವಹಣೆ, ಸಾವಯವ ಕೃಷಿ ಮತ್ತು ಸಮಗ್ರ ಕೃಷಿ ಪದ್ಧತಿಗಳು, ಜಾನುವಾರು ಪ್ರದರ್ಶನ, ಕೃಷಿ ಪರಿಕರಗಳ ಪ್ರಾತ್ಯಕ್ಷತೆ, ಕೃಷಿ ವಿಷಯದ ಪುಸ್ತಕ ಪ್ರಕಟಣೆಗಳು, ಕೃಷಿ ಫಲಪುಷ್ಪ ಪ್ರದರ್ಶನ ಮುಂತಾದ ಹಲವಾರು ಕೃಷಿ ಸಂಬಂಧಿತ ವಿಷಯಗಳ ಬಗ್ಗೆ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ಕೃಷಿ ಮೇಳದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಿಂದ ಮಳಿಗೆಯನ್ನು ಹಾಕಿ ಹಾವೇರಿ ಜಿಲ್ಲೆಯ ಹೆಸರಾಂತ ಬೆಳೆಗಳಾದ ಕಿರುಧಾನ್ಯಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

## ಸಾಧನೆಗೆ ಸಂದ ಗೌರವ



ದಿನಾಂಕ 02.10.2010 ರಿಂದ 05.10.2010ರವರೆಗೆ ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಆಯೋಜಿಸಲಾಗಿದ್ದ ಕೃಷಿ ಮೇಳ2010ದಲ್ಲಿ ಉತ್ತರ ಕರ್ನಾಟಕದ 12 ಜಿಲ್ಲೆಗಳ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರಿಗೆ "ಶ್ರೇಷ್ಠ ಕೃಷಿಕ" ಮತ್ತು "ಶ್ರೇಷ್ಠ ಕೃಷಿ ಮಹಿಳೆ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಮಗ್ರ ಕೃಷಿಯಲ್ಲಿನ ಸಾಧನೆಗಾಗಿ ಹಾವೇರಿ ಜಿಲ್ಲೆಯ ಶ್ರೀ ಪರಮೇಶ್ವರಯ್ಯ ವಿ. ಸಾಲಿಮಠ ಇವರಿಗೆ ಶ್ರೇಷ್ಠ ಕೃಷಿಕ ಹಾಗೂ ಸಾವಯವ ಕೃಷಿಯಲ್ಲಿನ ಸಾಧನೆಗಾಗಿ ಶ್ರೀಮತಿ ಲಲಿತವ್ವ ವಿ. ಹೊಸಳ್ಳಿಯವರಿಗೆ ಶ್ರೇಷ್ಠ ಕೃಷಿ ಮಹಿಳೆಯೆಂದು ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು. ಪ್ರಶಸ್ತಿ ಪುರಸ್ಕೃತರಿಗೆ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಅಭಿನಂದನೆ ಸಲ್ಲಿಸುತ್ತದೆ.

## ಸೋಯಾಅವರೆ ಬೆಳೆಯ ಕ್ಷೇತ್ರೋತ್ಸವ



ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಪ್ರಥಮ ಹಂತದ ಪ್ರಾತ್ಯಕ್ಷಿಕೆಯಡಿ ರಾಣೇಬೆನ್ನೂರು ತಾಲ್ಲೂಕಿನ ಜೋಯಿಸರಹರಳಹಳ್ಳಿ ಗ್ರಾಮದಲ್ಲಿ ಕೃಷಿ ವಿಶ್ವವಿದ್ಯಾಲಯ, ಧಾರವಾಡದಿಂದ ಬಿಡುಗಡೆಯಾಗಿರುವ ಸೋಯಾಅವರೆ ಬೆಳೆಯ ಸುಧಾರಿತ ತಳಿಯಾದ ಜೆ.ಎಸ್.-335 ರ ಕ್ಷೇತ್ರೋತ್ಸವನ್ನು ದಿನಾಂಕ 14.10.2010 ರಂದು ಪ್ರಗತಿಪರ ರೈತರಾದ ಶ್ರೀ ಶಂಕರಪ್ಪ ಗು. ಮುದ್ದೆಪ್ಪಳವರ್ ಇವರ ಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು. ರಾಣೇಬೆನ್ನೂರು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಎಲ್. ಎಸ್. ಅಜಗಣ್ಣನವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಸೋಯಾಅವರೆಯ ಉಪಯೋಗ ಹಾಗೂ ಅದರಲ್ಲಿರುವ ಪೋಷಕಾಂಶಗಳ ಮಹತ್ವದ ಬಗ್ಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು ಹಾಗೂ ಪ್ರಗತಿ ಪರ ರೈತರು ಭಾಗವಹಿಸಿದ್ದರು.

## ಅಂತರ್ ರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ



ವಿಶ್ವ ಸಂಸ್ಥೆಯು ಪ್ರತಿ ವರ್ಷ ಅಕ್ಟೋಬರ್ 15ನ್ನು ಅಂತರ ರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವೆಂದು ಘೋಷಿಸಿ ಆಚರಣೆಗೆ ತರುತ್ತಿದೆ. 1995ರಲ್ಲಿ ಚೀನಾ ದೇಶದ ಬೀಜಿಂಗ್ ನಲ್ಲಿ ನಡೆದ 4ನೇ ವಿಶ್ವ ಮಹಿಳಾ ಸಮ್ಮೇಳನದಲ್ಲಿ ಗ್ರಾಮೀಣ ಮಹಿಳೆಯರನ್ನು ಗೌರವಿಸುವ ಸಲುವಾಗಿ ವಿಶೇಷ ದಿನವೆಂದು ಗುರುತಿಸಿ ಆಚರಿಸುವ ಉದ್ದೇಶವನ್ನು ಚರ್ಚಿಸಲಾಯಿತು. ಇದರನ್ವಯ ವಿಶ್ವಸಂಸ್ಥೆ ಕೃಷಿ ಉತ್ಪಾದನೆಯಲ್ಲಿ, ಗ್ರಾಮೀಣ ಬಡತನ ನಿವಾರಣೆಯಲ್ಲಿ ಹಸಿವು ತಣಿಸುವಲ್ಲಿ ಗ್ರಾಮೀಣ ಮಹಿಳೆಯರ ಪಾತ್ರವನ್ನು ಮನಗಂಡು, ಅಕ್ಟೋಬರ್ 15ನ್ನು ಸಾಂಕೇತಿಕವಾಗಿ ಹಾಗೂ ಸಮಂಜಸವಾಗಿ 2008 ಹಾಗೂ ತದನಂತರದ ವರ್ಷಗಳಲ್ಲಿ ಅಂತರ ರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ ಎಂದು ಘೋಷಿಸಿತು.

ಗ್ರಾಮೀಣ ಮಹಿಳೆಯರನ್ನು ಪ್ರೋತ್ಸಹಿಸುವ ಹಲವು ಕಾರ್ಯಕ್ರಮಗಳು, ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳೆಯರ ಜವಾಬ್ದಾರಿ ಮುಂತಾದವುಗಳ ಬಗ್ಗೆ ಸಭೆ, ಸಮ್ಮೇಳನಗಳ ಮೂಲಕ ಜನಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಕಿಕೊಳ್ಳುವುದು ಈ ಆಚಾರಣೆಯ ಮೂಲ ಉದ್ದೇಶವಾಗಿದೆ.

## ವಿಶ್ವ ಆಹಾರ ದಿನ



ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಘಟಕವು (FAO) ತನ್ನ 20ನೇ ಅಧಿವೇಶನದಲ್ಲಿ FAO ಸ್ಥಾಪನಾ ದಿನದಿಂದ ಅಕ್ಟೋಬರ್ ಅನ್ನು ಪ್ರತಿ ವರ್ಷ 'ವಿಶ್ವ ಆಹಾರ' ದಿನವನ್ನಾಗಿ ಆಚರಿಸಲು ನಿರ್ಧರಿಸಿತು. ಡಿಸೆಂಬರ್ 5, 1980ರಂದು ವಿಶ್ವ ಸಂಸ್ಥೆಯು ಸಾಮಾನ್ಯ ಸಭೆಯ FAO ದ ನಿರ್ಧಾರವನ್ನು ಅನುಮೋದಿಸಿ, 1981 ರಿಂದ ಅಕ್ಟೋಬರ್ 16ನೇ ದಿನವನ್ನು ವಿಶ್ವ ಆಹಾರ ದಿನವನ್ನಾಗಿ ಆಚರಿಸಲು ಕರೆಕೊಟ್ಟಿತು. ಅಂದಿನಿಂದ ಇಲ್ಲಿಯವರೆಗೆ ಪ್ರತಿವರ್ಷ ಒಂದೊಂದು ವಿಶಿಷ್ಟ ವಿಷಯದೊಂದಿಗೆ ವಿಶ್ವದ 150ಕ್ಕೂ ಹೆಚ್ಚು ದೇಶಗಳಲ್ಲಿ ಅಕ್ಟೋಬರ್ 16ನ್ನು ವಿಶ್ವ ಆಹಾರ ದಿನವನ್ನಾಗಿ ಆಚರಿಸಲಾಗುತ್ತಿದೆ. ಹಸಿವು, ಬಡತನ, ಅಪೌಷ್ಟಿಕತೆಗಳ ಶಾಶ್ವತ ನಿವಾರಣೆಗೆ ಹೋರಾಟವನ್ನು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಬಲಪಡಿಸಿ ಜನಜಾಗೃತಿ ಮೂಡಿಸುವುದು, ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮೀಣ ಜನ/ಮಹಿಳೆಯರ ಪಾಲ್ಗೊಳ್ಳುವಿಕೆಗೆ ಉತ್ತೇಜಿಸುವುದು ಇದರ ಉದ್ದೇಶವಾಗಿದೆ.

## ಪಶು ಚಿಕಿತ್ಸಾ ಶಿಬಿರ



ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಹಾಗೂ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ರಾಣೇಬೆನ್ನೂರ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಪಶು ಚಿಕಿತ್ಸಾ ಶಿಬಿರಗಳನ್ನು ಮುಷ್ಟೂರು (22.10.2010), ತಿರುಮಲದೇವರಕೊಪ್ಪ (23.10.2010) ಮತ್ತು ಜೋಯಿಸರಹರಳಹಳ್ಳಿ (25.10.2010) ಗ್ರಾಮಗಳಲ್ಲಿ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಜಾನುವಾರುಗಳಿಗೆ ಮುಂಜಾಗ್ರತಾ ಕ್ರಮವಾಗಿ ಕಾಲುಬಾಯಿ ಜ್ವರ ರೋಗ ಬರದಂತೆ ಲಸಿಕೆಯನ್ನು ಹಾಕಲಾಯಿತು.



## ಪ್ರೌಢಶಾಲಾ ವೃತ್ತಿ ಶಿಕ್ಷಕರಿಗಾಗಿ ತರಬೇತಿ ಕಾರ್ಯಾಗಾರ







ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ, ಹಾವೇರಿ ಜಿಲ್ಲೆಯ ಪ್ರೌಢಶಾಲಾ ವೃತ್ತಿ ಶಿಕ್ಷಕರಿಗಾಗಿ ದಿನಾಂಕ: 08.11.2010 ರಿಂದ 10.11.2010 ರವರೆಗೆ 3 ದಿನಗಳ ಕೃಷಿ ಮತ್ತು ಸಾಮಾಜಿಕ ಉಪಯುಕ್ತತೆ ಹಾಗೂ ಉತ್ಪಾದನಾ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಹಾವೇರಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಎಸ್. ಬಿ. ಕೊಡ್ಲಿಯವರು ಉದ್ಘಾಟಿಸಿ ಮಾತನಾಡುತ್ತಾ ವೃತ್ತಿ ಶಿಕ್ಷಕರು ಕೃಷಿ ಹಾಗೂ ಕೃಷಿಯೇತರ ವಿಷಯಗಳಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಈ ಕಾರ್ಯಾಗಾರದಲ್ಲಿ ಕಲಿತುಕೊಂಡು ತಮ್ಮ ವೃತ್ತಿ ಜೀವನದಲ್ಲಿ ಉಪಯೋಗ ಪಡಿಸಿಕೊಳ್ಳುವಂತೆ ಕೋರಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಂ.ವಿ. ನಾಗರಾಜ ರವರು ವಹಿಸಿದ್ದರು. ಈ ಕಾರ್ಯಾಗಾರದಲ್ಲಿ ಶಿಕ್ಷಕರಿಗೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಹೈನುಗಾರಿಕೆ, ಸಸ್ಯ ಸಂರಕ್ಷಣೆ, ಮಣ್ಣು ಪರೀಕ್ಷೆ, ಪೌಷ್ಠಿಕ ಆರೋಗ್ಯ, ಸೋಪ್ ಆಯಿಲ್ ಮತ್ತು ಫಿನೈಲ್ ತಯಾರಿಕೆ, ಅಲಂಕಾರಿಕ ಮೇಣದಬತ್ತಿ ತಯಾರಿಕೆ, ಕೋಳಿಸಾಕಾಣಿಕೆ, ಕಸಿ ಕಟ್ಟುವುದು ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಹಾಗೂ ಪ್ರಾಯೋಗಿಕ ತರಬೇತಿಯನ್ನು ನೀಡಿದರು. ಕಾರ್ಯಾಗಾರದ ಉಪಯೋಗವನ್ನು ಹಾವೇರಿ ಜಿಲ್ಲೆಯ ಸುಮಾರು 65 ಶಿಕ್ಷಕ-ಶಿಕ್ಷಕಿಯರು ಪಡೆದುಕೊಂಡರು.



## ಕೃಷಿ ಉತ್ಸವಗಳಲ್ಲಿ ಭಾಗವಹಿಸುವಿಕೆ

ಕೇಂದ್ರದ ವಿಜ್ಞಾನಿಗಳು ಜಿಲ್ಲಾ, ತಾಲ್ಲೂಕು ಹಾಗು ಹೋಬಳಿ ಮಟ್ಟಗಳಲ್ಲಿ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಜರುಗಿದ ಕೃಷಿ ಉತ್ಸವಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.



## Farmers fair Krishimela 2010



On the eve of Birthday of Father of Nation Shri Mahatma Gandhiji and late Shri Lal Bahaddur Shastriji, a four day Krishimela was organized by University of Agricultural Sciences from 2nd October to 5th October 2010 at UAS campus Dharwad. The developmental activities in the field of Agriculture were exhibited in the mela.

The scientists of Krishi Vigyana Kendra actively participated in different committees of mela viz., exhibition, farmers innovations, consultancy, shreshta krishika, shreshta krishi mahile and organic farming.

## Award for achievements



The progressive farmers and farm women of 12 districts of North Karnataka were awarded with shreshta Krishika and Shreshta Krishi mahile by UAS Dharwad during Krishimela 2010.

Sri.P.V. Salimath and Smt. Lalitamma Hosalli were awarded with Shreshta Krishika and Shreshta Krishi mahile award for Haveri district, for their contribution in the field of Integrated farming system and organic farming.

## Soybean-Field day



Soyabean (J.S-335) Field day was celebrated in the field of Sri.S.G.Muddeppalavar of yerekuppi village of Ranebennur taluk on 14.10.2010.

## Celebration of special days



An International Rural Women's day was celebrated on 15.10.2010 at KVK campus and role of rural women in Agriculture was discussed.



The world food day was celebrated on 06.10.2010 and a guest lecture was arranged on Importance of minor millets.

## Animal health camps



**Animal Health Camps were organized in collaboration with the Department of Animal Husbandry at Mustur, Joisaraharalahalli and Thirumaladevarakoppa village of Ranebennur taluk and preventive vaccination on foot and mouth disease was done.**

